ಕೊರಟಗೆರೆ ತಾಲ್ಲೂಕಿನಲ್ಲಿ ಚೆಕ್ ಡ್ಯಾಂಗಳ ನಿರ್ಮಾಣ

584 - ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷಿ ಇಲಾಖೆಯಡಿಯಲ್ಲಿ ಭೂಸಾರ ಸಂರಕ್ಷಣೆಗಾಗಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಎಷ್ಟು ಕಡೆ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ. ಇನ್ನು ಯಾವ ಯಾವ ಸ್ಥಳಗಳಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸಲು ಯೋಜಿಸಲಾಗಿದೆ?*

ಆ) *ಚೆಕ್ ಡ್ಯಾಂಗಳನ್ನು ನಿರ್ಮಿಸುವಲ್ಲಿ ಕಳಪೆ ಕಾಮಗಾರಿಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಕೃಷಿ ಇಲಾಖೆವತಿಯಿಂದ ಈಗಾಗಲೇ 258 ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆಯಲ್ಲದೆ, 1997-98ನೇ ಸಾಲಿನಲ್ಲಿ ಇನ್ನೂ46 ಚೆಕ್‌ಡ್ಯಾಂಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು ಇವುಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಅನುಬಂಧ -1

ಕ್ರಮ ಸಂಖ್ಯೆ	ಚೆಕ್ ಡ್ಯಾಂಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುವ ಗ್ರಾಮದ ಹೆಸರು.	ಪಂಚಾಯತಿ	ಉದ್ದೇಶಿಸಲಾಗಿರುವ ಚೆಕ್‌ಡ್ಯಾಂಗಳ ಸಂಖ್ಯೆ.	ಯೋಜನೆ
1	2	3	4	5
1.	ಭೀಮಸಾಗರ	ಕೋಳಾಲ	1	ದಶಲಕ್ಷ ಭಾವಿ ಯೋಜನೆ
2.	ಎ. ವೆಂಕಟಾಪುರ	ನೀಲಗೊಂಡನಹಳ್ಳಿ	2	ಉದ್ಯೋಗ ಭರವಸೆ ಯೋಜನೆ
3.	ಹೊಲತಾಳು	ಕುರಂಕೋಟೆ	1	ದಶಲಕ್ಷ ಬಾವಿ ಯೋಜನೆ
4.	ಗಟ್ಲಹಳ್ಳಿ	ಬುಕ್ಕಾಪಟ್ಟ	1	-"-
5.	ಕಾಮರಾಜನಹಳ್ಳಿ	ಹುಲಿಕುಂಟೆ	1	-"-

1	2	3	4	5
6.	ಮೋರಗಾನಹಳ್ಳಿ	ವಜ್ಜನಕುರಿಕೆ	1	-"-
7.	ವಡ್ಡಗೆರೆ	ವಡ್ಡಗೆರೆ		-"-
8.	ಮುದ್ದನಹಳ್ಳಿ	ಜಿ.ಡಿ.ಪುರ	1	-"-
9.	ರೊಗ್ಗನಹಳ್ಳಿ	ಬೂದಗವಿ	1	-"-
10.	ಸಿರಿಗೋನಹಳ್ಳಿ	ಕ್ಯಾಮೇನಹಳ್ಳಿ	1	ಆರೋ ಉದ್ಯೋಗ ಭರವಸೆ ಯೋಜನೆ
11.	ಚಿಕ್ಕಣ್ಣಹಳ್ಳಿ	ತೋವಿನಕೆರೆ	6	-"-
12.	ಓಬನಹಳ್ಳಿ	ತೋವಿನಕೆರೆ	4	-"-
13.	ಕಲ್ಕೆರೆ	ವಡ್ಡಗೆರೆ	12	ಡಿ.ಪಿ.ಎ.ಪಿ.
14.	ಮಾದೇನಹಳ್ಳಿ	ಅರಸಾಪುರ	5	-"-
15.	ವೀರಾಪುರ	ತೀತಾ	4	-"-
16.	ಹೊನ್ನೇನಹಳ್ಳಿ	ಹೊಳವನಹಳ್ಳಿ	4	ಉದ್ಯೋಗ ಭರವಸೆ ಯೋಜನೆ

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಭೂಸಾರ ಸಂರಕ್ಷಣಾ ಇಲಾಖೆಯವರು ಅನೇಕ ರೈತರುಗಳಿಗೆ ಚೆಕ್ ಡ್ಯಾಂಗಳನ್ನು ಹಾಕಿಸಿಕೊಡುತ್ತೇವೆಂದು ಹೇಳಿ ಸರ್ಕಾರವು ಒಂದು ಕಾನೂನನ್ನು ಮಾಡಿ ಈ ಇಲಾಖೆಯಿಂದ ಚೆಕ್ ಡ್ಯಾಂಗಳನ್ನು ಮಾಡುತ್ತೇವೆಂದು ಈಗಾಗಲೇ ಕೊರಟಗೆರೆ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಮಾಡಿದ್ದಾರೆ. ಆ ಚೆಕ್ ಡ್ಯಾಂಗಳನ್ನು ಶೇ. 70ರಷ್ಟು ನಾಶವಾಗಿದೆ. ಅಲ್ಲಿ ಸುಮ್ಮನೆ ಮಣ್ಣು ಹಾಕಿ ಎರಡು ಕಲ್ಲುಗಳನ್ನು ಇಟ್ಟು ಸುಮಾರು ಲಕ್ಷ ರೂಪಾಯಿಗಳ ಬಿಲ್ ಮಾಡಿದ್ದಾರೆ. 1991 ರಿಂದ 1994ನೇ ಇಸವಿವರೆಗೂ ಹಾಗೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಈ ಕಳಪೆ ಕಾಮಗಾರಿಯ ಬಗ್ಗೆ ಪರಿಶೀಲನೆ ಮಾಡಿದ್ದಾರಾ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಕೊರಟಗೆರೆ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರು ರಾಜ್ಯದ್ದು ಎಲ್ಲಾ ಕೇಳುತ್ತಿದ್ದಾರೆ. ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ, ಅದರೂ ನಾನು ಉತ್ತರ ನೀಡಲು ಇಚ್ಚಿಸುತ್ತೇನೆ. 1991–92ನೇ ಇಸವಿಯಿಂದ ಪ್ರಾರಂಭ ಮಾಡಿ 1995-96ರವರೆಗೆ ರಾಜ್ಯದಲ್ಲಾಗಿರುವಂತಹ ಕೆಲಸಕಾರ್ಯಗಳು ಯಾವ ರೀತಿಯಲ್ಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿದ್ದೇನೆ. ಅದರಲ್ಲಿ ಸಾಕಷ್ಟು ಕೆಲಸಗಳು ಸಮರ್ಪಕವಾಗಿಲ್ಲ, ಮತ್ತು ಗುಣಮಟ್ಟ ಸರಿಯಾಗಿಲ್ಲ, ಎಂದೂ ಸಹ ವರದಿ ಬಂದಿದೆ. ಮತ್ತೆ ಕೆಲವು ಕಡೆ ಕೆಲಸಗಳು ಆಗದೇ ಬರೀ ಕಾಗದದ ಮೇಲೆ ತಡೆ ಅಣೆಗಳನ್ನು ಕಟ್ಟಿ ಹಣವನ್ನು ಪಡೆದಂತಹ

ಉದಾಹರಣೆಗಳೂ ಸಹ ಇದೆ, ಅಂಥವರ ಮೇಲೆ ಇಲಾಖೆಯವರು ಕ್ರಮವನ್ನು ತೆಗೆದುಕೊಂಡಿದ್ದೇವೆ, ಮತ್ತೆ ನೂರಕ್ಕೂ ಹೆಚ್ಚು ಕೇಸ್‌ಗಳನ್ನು ಪೋಲೀಸ್‌ನವರು ದಾಖಲು ಮಾಡಿಸಿ ಸುಮಾರು 70 ಜನರನ್ನು ಇವತ್ತು ಕಟಕಟೆಯಲ್ಲಿ ನಿಲ್ಲಿಸುವಂತಹ ಕೆಲಸವನ್ನು ಮಾಡಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳ ಕ್ಷೇತ್ರಗಳಲ್ಲಿ ಈ ರೀತಿಯಾಗಿ ಏನಾದರೂ ನಡೆದಿದ್ದರೆ, ಈಗ ಅವರ ಕ್ಷೇತ್ರದ ಅಂಕಿಅಂಶಗಳನ್ನೂ ಸಹ ಕೊಟ್ಟಿದ್ದೇವೆ. ಈಗಲೂ ಇಂತಹ ಕಡೆ ಗುಣಮಟ್ಟ ಸರಿಯಾಗಿಲ್ಲ, ಅಥವಾ ಕಾಗದದ ಮೇಲೆ ಮಾತ್ರ ತಡೆ ಆಣೆಯನ್ನು ಮಾಡಿದ್ದಾರೆಂದು ಅವರು ತಿಳಿಸಿದರೂ ಇವತ್ತಿನ ಸಂಜೆಯೊಳಗೆ ಅವರು ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಭರವಸೆಯನ್ನು ಕೊಡಲಿಚ್ಚಿಸುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರ ಸಮಾಧಾನಕರವಾಗಿದೆ. ರಾಜ್ಯಕ್ಕೆ ಉತ್ತಮವಾದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಕಳಪೆ ಕಾಮಗಾರಿಯನ್ನು ಮಾಡಿರತಕ್ಕಂಥದ್ದು ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೊಡುತ್ತೇನೆ.

ಅಧ್ಯಕ್ಷರು : ತಾವು ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಳುಹಿಸಿ ಕೊಡಿ, ಮಾನ್ಯ ಮಂತ್ರಿಯವರು ಸಂಜೆಯೊಳಗಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅದರ ಮಾಹಿತಿಗಳನ್ನು ಕೊಡುತ್ತೇನೆ. ಆ ಬಗ್ಗೆ ಅವರು ಯಾವುದೇ ಅಧಿಕಾರಿಗಳ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಟ್ಟಿಲ್ಲ. ಆದುದರಿಂದ ದಯಮಾಡಿ ಮಾನ್ಯ ಕೃಷಿ ಸಚಿವರು ಇದುವರೆಗೂ ಏನು ಪ್ರಾಮಾಣಿಕವಾದಂತಹ ಕೆಲಸವನ್ನು ಮಾಡಿದ್ದಾರೆ, ಅದರ ಪ್ರಯೋಜನ ಇನ್ನಷ್ಟು ಪಡೆಯಬೇಕಾದರೆ ಅಂತಹ ಅಧಿಕಾರಿಗಳು ಯಾರಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರಾದ ಬೈರೇಗೌಡರು ನನ್ನ ಕ್ಷೇತ್ರಕ್ಕೂ ಹೋಗಿದ್ದರು. ಇಲ್ಲಿ ಈ ಇಲಾಖೆ ಮಾಡಿರುವಂತಹ ಕೆಲಸಗಳನ್ನು ನೋಡಿದರು. ಅಲ್ಲಿ ಒಂದು ಚೆಕ್ ಡ್ಯಾಂ ಆಗಿದ್ದು, ಅದು ಕಳಪೆ ಕಾಮಗಾರಿ ಎಂದು ತೀರ್ಮಾನ ಮಾಡಿದ್ದಾರೆ. ಸಸಿ ನೆಡುವಂತಹ ಕಾರ್ಯವೇ, ಆದರೂ ಕೂಡ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ಬೈರೇಗೌಡರ ಮೇಲೆ ವಿಶ್ವಾಸವಿದೆ. ದಯಮಾಡಿ ಅವರು ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ? ಅಲ್ಲಿ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬೈರೇಗೌಡರು ಈಗಾಗಲೇ ಬಹಳಷ್ಟು ಜನರ ಮೇಲೆ ಕ್ರಮವನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಇವರು ತೆಗೆದುಕೊಂಡಿರುವ ಕ್ರಮ ಜಾಸ್ತಿಯಾಗಿ ಬಿಟ್ಟಿದೆ. ಇಲ್ಲಿ ಎಲ್ಲಾ ಕೆಳಮಟ್ಟದಲ್ಲಿರುವವರನ್ನು ಬಲಿ ಹಾಕಿದ್ದಾರೆ. ಇದೆಲ್ಲಾ ಮೇಲ್ಮಟ್ಟದಲ್ಲಿ ನಡೆದಿರುವಂತಹ ವ್ಯವಹಾರವಾಗಿದೆ. ಅವರು ಆಫೀಸ್‌ನಲ್ಲಿ ಕುಳಿತು ಬಿಲ್‌ಗಳನ್ನು ಪಾಸ್ ಮಾಡಿ, ಅವರೇ ಹಣವನ್ನು ಇಟ್ಟುಕೊಂಡು ಅಲ್ಲಿ ಬದು ಹಾಕಿದ್ದೇವೆ, ನಾಲಬಂದ್ ಕಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಅಂಥವರನ್ನು ಹಿಡಿಯುವುದಕ್ಕೆ ಬಲೆಯನ್ನು ತಯಾರಿದ್ದೇವೆಂದು ಹೇಳಿದರು. ಆ ಬಲೆ ಏನಾದರೂ ತಯಾರು ಆಗಿದೆಯೇ, ಬೆಂಗಳೂರಿನಲ್ಲೂ ಅಂಥವರನ್ನು ಅದರ ಕೆಳಗೆ ತನ್ನಿ ಎಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಮೇಲಿನ ಅಧಿಕಾರಿಗಳಿಂದ ಕೆಳಮಟ್ಟದವರೆಗೂ ಶಾಮೀಲಾಗಿರುವಂಥಾದ್ದು ನಿಜ. ಮೇಲಿನ ಅಧಿಕಾರಿಗಳ ಸಹಕಾರವಿಲ್ಲದೆ ಕೆಳಗಿನ ಅಧಿಕಾರಿಗಳು ಈ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂಥಾದ್ದಕ್ಕೆ ನಾನು ಈಗಾಗಲೇ ಇಲಾಖೆಯ ಕಾರ್ಯದರ್ಶಿಯವರಿಗೆ ನಿರ್ದೇಶನವನ್ನು ನೀಡಿದ್ದೇನೆ. ಅವರು ಪಿರಿಯಾಡಿಕಲ್ ಆಗಿ ಚೆಕ್ ಮಾಡಬೇಕಾಗುತ್ತದೆ. ಅವರ ಜಾಬ್ ಚಾರ್ಟ್ ಇರುತ್ತದೆ ಆ ಪ್ರಕಾರವಾಗಿ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಯಾರು ಯಾರು ತಪ್ಪು ಮಾಡಿದ್ದಾರೆ ಅವರನ್ನು ಹಿಡಿಯಿರಿ.

ಶ್ರೀ ಸಿ. ಬೈರೇಗೌಡರು : ಮಾನ್ಯ ಅಧ್ಯಕ್ಷರೆ, ಮಾನ್ಯ ಕರ್ಕಿಯವರು ಸೂಚನೆ ಕೊಟ್ಟ ಹಾಗೆ ನಾನು ಅವರ ಕ್ಷೇತ್ರಕ್ಕೂ ಹೋಗಿ ಬೆಟ್ಟಗುಡ್ಡವನ್ನೆಲ್ಲಾ ಸುತ್ತಿದ್ದೇನೆ. ಅವರು ಅಲ್ಲಿ ಗಿಡವನ್ನು ಹಾಕಿದ್ದೇವೆಂದು ಹೇಳುತ್ತಾರೆ. ನಾನು ಅದನ್ನು ಹುಡುಕಿ ಹುಡುಕಿ ಸಾಕಾಯಿತು, ಅದು ಸಿಗಲಿಲ್ಲ. ಕೊನೆಗೆ ಅಲ್ಲಿ ಒಂದು ಸೀಬೆಗಿಡ ಕಾಣಿಸಿತು. ನೋಡಿ ಸಾರ್ ಇಲ್ಲಿ ಹಾಕಿದ್ದೇವೆಂದು ಅಧಿಕಾರಿಗಳು ತೋರಿಸಿದರು. ಅದರಲ್ಲಿ 3-4 ಎಲೆಗಳು ಮಾತ್ರ ಇತ್ತು. ಅದು ನನಗೆ ಅರ್ಥವಾಗಲಿಲ್ಲ, ಏಕೆಂದರೆ ಅಷ್ಟು ಮಳೆ ಬರುವಂತಹ ಪ್ರದೇಶದಲ್ಲಿ ಸೀಬೆ ಗಿಡವನ್ನು ಹಾಕಿದರೆ ಅದು ಬರುವುದಿಲ್ಲ. ಅಷ್ಟೂ ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ. ಅಲ್ಲಿ ಮಾಡಿರತಕ್ಕಂಥಾದ್ದು ತಡೆಯಾಣೆಯಲ್ಲ, ಅದು ಕಿಂಡಿ ಯಾಣೆಯಾಗಿದ್ದು, ಅಲ್ಲಿ ನಾನು ನೋಡಿರತಕ್ಕಂಥಾದ್ದು ಕಿಂಡಿಯಾಣೆ ಕೆಲಸವೂ ಸರಿಯಾಗಿದೆ. ಆ ಕೆಲಸವು ಕ್ವಾಲಿಟಿ ಆಫ್ ವರ್ಕ್ ಆಗಿದ್ದು ಅದಕ್ಕೆ ಹಲಗೆಯನ್ನು ಹಾಕಿರಲಿಲ್ಲ. ಇವತ್ತು ರೈತರು ಹಲಗೆಯನ್ನು ಹಾಕಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆ ಕಾರಣದಿಂದ ಆ ಕೆಲಸವನ್ನು ಮಾಡಿರಲಿಲ್ಲ. ಅಲ್ಲಿ ಟ್ರೆಂಚ್ ಮಾಡಿದ್ದಾರೆ ಆದರೆ ಯಾವ ಗಿಡವನ್ನು ಎಲ್ಲಿ ಹಾಕಬೇಕೆಂದು ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ.

ಡಾ||ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾನು ಹೋದಾಗ ಅಲ್ಲಿ ಗಿಡವನ್ನೇ ಹಾಕಿರಲಿಲ್ಲ. ಅಲ್ಲಿ ಒಂದೇ ಒಂದು ಗಿಡವನ್ನು ಹಾಕಿದ್ದರು.

ಶ್ರೀ ಸಿ. ಬೈರೇಗೌಡ : ಅದನ್ನು ನಾನೇ ಹೇಳಿದ್ದೇನೆಲ್ಲಾ, ಅಲ್ಲಿ ಯಾವ ಗಿಡವನ್ನು ಎಲ್ಲಿ ಹಾಕಬೇಕೆಂಬ ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ.

ಮೇಲುಕೋಟೆಯಲ್ಲಿ ಗ್ರಾಮೀಣಾಭಿವೃದ್ಧಿ ಸಂಸ್ಥೆ (ವಿಕಾಸನ)

476 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಗ್ರಾಮದಲ್ಲಿ ಇರುವ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ವಿಕಾಸನ)ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಇಂದಿರಾ, ಆಶ್ರಯ ಯೋಜನೆಯಲ್ಲಿ ನಬಾರ್ಡ್ ವತಿಯಿಂದ ಮನೆ ನಿರ್ಮಾಣ ಮಾಡಿಕೊಂಡು ಯಾವ ಯಾವ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?